ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಕಳುಹಿಸಿಕೊಡಿ ನೋಡುತ್ತೇನೆ.

ELECTIONS TO TALUK DEVELOPMENT BOARDS

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಸಭೆ ಮುಗಿಯುವುದರೊಳಗಾಗಿ ಎರಡು ಪ್ರಾಮುಖ್ಯವಾದ ವಿಷಯಗಳ ಬಗ್ಗೆ ಹೇಳುತ್ತೇನೆಂದು ಅಪ್ಪಣೆ ಕೊಟ್ಟಿದ್ದಾರೆ.

ಒಂದನೆಯದಾಗಿ ಮೈಸೂರು ರಾಜ್ಯದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ ನಡೆಸುವುದು ಎರಡನೆಯದಾಗಿ ಒಂದೆ ನಡೆದಂಥ ದಸರಾ ವಸ್ತುಪ್ರದರ್ಶನದ ಜಯ ಲಲಿತಾ ಪ್ರಕರಣದ ಅಕೌಂಟ್ಸ್ ಬಗ್ಗೆ ಈ ಸಭೆಯ ಮುಂದೆ ಇಡಬೇಕು ಎಂದು ಹೇಳಿದಾಗ ಈ ಸಭೆಯ ಮುಂದೆ ಇಡುತ್ತೇವೆ ಎಂದು—ಮಾನ್ಯ ಸಚಿವರು ಹೇಳಿದರು. ಆದುದರಿಂದ ಇದರ ಬಗ್ಗೆ ಹೇಳಬೇಕು. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಯನ್ನು ನಡೆಸುತ್ತಾರೆಯೇ ಇಲ್ಲವೇ ? ಖಚಿತವಾಗಿ ಈ ಸಭೆ ಮುಗಿಯುವುದರೊಳಗೆ ಎಂದರೆ 25ನೇ ತಾರೀಖಿನೊಳಗೆ ಹೇಳಬೇಕು.

ಅಧ್ಯಕ್ಷರು.—ಬಹುಶಃ ಈ ಸಭೆ ಮುಗಿಯುವುದರೊಳಗೆ ಇಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಭೆ ಮುಗಿಯುವುದರೊಳಗೆ ಇಡುತ್ತಾರೆ ಎಂದು ಹೇಳುವುದು ಇದು ಮೂರನೆಯ ಸಲ. ಇನ್ನು 3 ದಿವಸ ತಪ್ಪಿದರೆ 4 ದಿವಸ ಈ ಸಭೆ ನಡೆಯಬಹುದು. ಆದುದರಿಂದ ಈ ಬಗ್ಗೆ ಒಂದು ಖಚಿತವಾದ ದಿವಸ ಹೇಳುತ್ತೇವೆ ಎಂದು ತಿಳಿಸಿದರೆ ಈ ಬಗ್ಗೆ ನಾವು ಏನಾದರೂ ಹೇಳಲು ಅನುಕೂಲವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಗಳನ್ನು ನಡೆಸುತ್ತೀರಾ ಅಥವಾ ಇಲ್ಲವೇ ಅಥವಾ ಈಗ ಇರತಕ್ಕಂಥ ಅವಧಿಯನ್ನು ಮುಂದುವರೆಸಿಕೊಂಡು ಹೋಗುತ್ತೀರಾ ಹೇಗೆ ?

Sri D. DAVARAJ URS.—I cannot say now.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪ್ರಜಾಪ್ರಭುತ್ವದ ನೀತಿಯ ತತ್ವದ ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ ಮಂತ್ರಿಮಂಡಲ ನಡೆಸಲೇ ಬೇಕು. ಈ ಸಭೆ ಮುಗಿಯುವುದರೊಳಗೆ ತಾವು ಖಚಿತವಾಗಿ ಹೇಳಲೇಬೇಕು. ಇಲ್ಲದೇ ಹೋದರೆ ಇದರಿಂದ ಬೇಕಾದಷ್ಟು ಮಾತುಗಳು ಬರುತ್ತದೆ. ನೀವು ಈ ಬಗ್ಗೆ ಚುನಾವಣೆ ನಡೆಸುವುದಾದರೆ ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವದ ತತ್ವಕ್ಕೆ ಬೆಲೆ ಬರುತ್ತದೆ, ಆದುದರಿಂದ ತಾವು ಈ ವಿಷಯದಲ್ಲಿ ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಅಧಿವೇಶನ ಪ್ರಾರಂಭವಾಗಿ ಸುಮಾರು 3 ತಿಂಗಳಿಗಿಂತಲೂ ಹೆಚ್ಚಾಯಿತು. ಇದುವರೆಗೂ ಕೂಡ ಸರ್ಕಾರ ಒಂದು ಖಚಿತವಾದ ನಿರ್ಧಾರಕ್ಕೆ ಬರಲಿಲ್ಲ ಎಂದರೆ ನಾವು ಸರ್ಕಾರದ ಕಾರ್ಯಚಟುವಟಿಕೆಗಳ ಬಗ್ಗೆ ಲೋಚನೆಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರ ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಬಹಿರಂಗವಾಗಿ ಪ್ರಕಟಿಸಿದರೆ ನಮಗೆ ಗೊತ್ತಾಗುತ್ತದೆ. ಆನಂತರ ನಮ್ಮದೂ ಕೂಡ ಏನಾದರೂ ಇದ್ದರೆ ಹೇಳಲು ಅವಕಾಶವಾಗುತ್ತದೆ. ಅದನ್ನು ಬಿಟ್ಟು ಇದನ್ನು ಸಸ್ಪೆನ್ಸ್‌ನಲ್ಲಿ ಇಟ್ಟರೆ ನಮಗೆ ಮಾತನಾಡುವುದಕ್ಕೆ ಅವಕಾಶ ಏನೂ ಆಗುವುದಿಲ್ಲ. ಆದುದರಿಂದ ಅದರ ಬಗ್ಗೆ ಒಂದು ಖಚಿತವಾದ ಅಭಿಪ್ರಾಯ ಹೇಳಿಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಗಳನ್ನು ನಡೆಸಿದರೆ ಚುನಾಯಿತ ಪ್ರತಿನಿಧಿಗಳು ಬರುವುದಕ್ಕೆ ಅವಕಾಶವಾಗುತ್ತದೆ. ಇದು ತಮಗೂ ಗೊತ್ತಿದೆ. ಇದು ಸಾಧಾರಣ ವಿಷಯವಾಗಿದ್ದರೆ ನಾವು ಒತ್ತಾಯ ಮಾಡಬೇಕಾಗಿಲ್ಲ. ಇದು ಸರ್ಕಾರದ ಅನೇಕ ಆಶ್ವಾಸನೆಗಳಿಗೆ ಸಂಬಂಧಪಟ್ಟದ್ದು. ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ಸಂಬಂಧಪಟ್ಟದ್ದು. ಇದು ರಾಜ್ಯದ ಪ್ರಜಾಪ್ರಭುತ್ವದ ನೀತಿಗೆ ಸಂಬಂಧಪಟ್ಟದ್ದು. ಆದುದರಿಂದ ಈ ವಿಷಯದಲ್ಲಿ ತಮ್ಮ ನೀತಿ ಏನು ಎನ್ನುವುದನ್ನು ಖಚಿತವಾಗಿ ತಿಳಿಸಬೇಕು ನಾವು ಒತ್ತಾಯ ಮಾಡುತ್ತಿದ್ದೇವೆ. ಆದಷ್ಟು ಬೇಗ ಚುನಾವಣೆಗಳನ್ನು ಮಾಡುತ್ತೇವೆ ಏನ್ನುವ ಆಶ್ವಾಸನೆಯನ್ನು ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಏನೂ ಹೇಳುವ ಹಾಗೆ ಇಲ್ಲ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ನಿಮಿಷದಲ್ಲಿ ಹೇಳುವುದಕ್ಕೆ ಆಗದೆ ಇದ್ದರೂ ಸಭೆ ಮುಗಿಯುವುದರೊಳಗಾಗಿ ಹೇಳಬಹುದು. ತಾಲ್ಲೂಕು ಬೋರ್ಡು ಚುನಾವಣೆಗಳು ಆಗತಕ್ಕದ್ದರ ಬಗ್ಗೆ ನಾವು ವರಡೂವರೆ ಗಂಟೆ ಕಾಲ ಚರ್ಚೆಯಾಗಲು ಅವಕಾಶ ಬೇಕೆಂದು ಕೇಳಿದೆವು. ಆ ಸಂದರ್ಭದಲ್ಲಿ ಬಹುಶಃ ಸರ್ಕಾರ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರುತ್ತಿತ್ತು. ಬಜೆಟ್ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಮತ್ತು ಪೊನ್ನೆ ಕೂಡ ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಸಭೆ 25ನೇ ತಾರೀಖಿಗೆ ಮುಗಿಯುತ್ತದೆಯೋ ಅಥವಾ ಏಂದು ಮುಗಿಯುತ್ತದೆಯೋ ಗೊತ್ತಿಲ್ಲ. ಈ ಸಭೆ ಮುಗಿದುಹೋದಮೇಲೆ ತಾಲ್ಲೂಕು ಬೋರ್ಡುಗಳನ್ನು ರದ್ದುಮಾಡಿ ತಮ್ಮ ಪಕ್ಷದ ಸಲಹಾ ಸಮಿತಿಗಳನ್ನು ನೇಮಕ ಮಾಡತಕ್ಕ ಸನ್ನಾಹ ನಡೆಯುತ್ತಿದೆ ಎಂದು ಕೇಳಿದ್ದೇವೆ. ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಒಪ್ಪಿಲ್ಲ ಎನ್ನತಕ್ಕ ಒಂದು ಮಾತೂ ಇಲ್ಲ. ಅದೇನಿ ಇರಲಿ, ಆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದ ವಿಚಿತ ನಿಲುವು ಏನು ಎಂಬುದನ್ನು ಹೇಳಲಿ. ಸರ್ಕಾರದ ನಿಲುವನ್ನು ತಿಳಿದರೆ ನಮ್ಮ ಪ್ರತಿಕ್ರಿಯೆಯನ್ನು ಈ ಸಭೆಯಲ್ಲಿ ವ್ಯಕ್ತಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸಭೆಯೊಳಗೆ ಅವರು ಕೊಟ್ಟಿರತಕ್ಕ ಆಶ್ವಾಸನೆ ಏನಿದೆ ಅದನ್ನು ನಡೆಸಿ ಎಂದು ನಾನು ಹೇಳುತ್ತಿದ್ದೇನೆ. ಈ ಬಗ್ಗೆ ಅಂತಿಮವಾದ ತೀರ್ಮಾನವನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ದಸರಾ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಖರ್ಚು ವೆಚ್ಚಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳು ಒಪ್ಪಿಕೊಂಡಿದ್ದರು. ಮೂರು ತಿಂಗಳಿನಿಂದ ಈ ವಿಷಯ ಹಾಗೆಯೆ ಮುಂದೂಡಿಕೊಂಡು ಬರುತ್ತಿದೆ. ಕಳೆದ ಸಾರಿ ಚರ್ಚೆ ಮಾಡಿದಾಗ 15 ದಿವಸಗಳಲ್ಲಿ ಸಭೆಯ ಮುಂದೆ ಸಾಧ್ಯವಾದರೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದುದನ್ನು ತಮ್ಮ ಜ್ಞಾಪಕಕ್ಕೆ ತುರ ತ್ತೇನೆ. ಅಕೌಂಟ್ಸ್ ಇನ್ನೂ ಕಂಪೈಲ್ ಆಗಿಲ್ಲವೆಂದು ಕೇಳಿದ್ದೆ ನೆ. ಸರ್ಕಾರದವರು ಒಪ್ಪಿಕೊಂಡಿರುವಂತೆ ಲೆಕ್ಕಗಳನ್ನು ಸಭೆಯ ಮುಂದೆ ಇಡುವಂತೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಮುಂದಿನ ಹೇಳಿಕೆಯನ್ನು ಪ್ರಶ್ನೀಕರಿಸುತ್ತಾರೆಯೇ ಎನ್ನುವುದನ್ನು ಸಂಬಂಧಪಟ್ಟ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಗಳಿಗೆ ಸಂಬಂಧ ಪಟ್ಟಂತಹ ವಿಷಯ ಸರ್ಕಾರದ ಮುಂದೆ ಇದೆ ಎಂದು ನಾನು ಮೊದಲೇ ಹೇಳಿದ್ದೇನೆ. ಪಕ್ಷಾತೀತವಾದ ರೀತಿ ಯಲ್ಲಿ ಸರ್ಕಾರ ಎಲ್ಲ ಸಾಧಕಬಾಧಕಗಳನ್ನೂ ಪರಿಶೀಲನೆ ಮಾಡಿ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಸರ್ಕಾರ ಆ ಬಗ್ಗೆ ಇನ್ನೂ ಯಾವ ತೀರ್ಮಾನವನೂ ತೆಗೆದುಕೊಂಡಿಲ್ಲ. ಈ ವಿಷಯದಲ್ಲಿ ಹೇಳಿಕೆ ಕೊಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ಸರ್ಕಾರದಲ್ಲಿ ತೀರ್ಮಾನವಾಗಿಹೆ ನಾನು ಹೇಗೆ ಹೇಳಿಕೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದ ತೀರ್ಮಾನದ ನಂತರ ಹೇಳಿಕೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಯತ್ನ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾಳೆಯ ದಿವಸ ನಾನು ಪ್ರಯತ್ನ ಮಾಡಿದೆ, ಆಗಲಿಲ್ಲವೆಂದು ಜಾಣ್ಮೆಯಿಂದ ಜಾರಿಕೊಳ್ಳುವುದು ಬೇಡ. ಈ ಅಧಿವೇಶನ ಪೂರೈಸುವುದರೊಳಗಾಗಿ ಹೇಳಿಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಲಿ.

ಅಧ್ಯಕ್ಷರು.—ಅಧಿವೇಶನ ಮುಗಿಯುವುದರೊಳಗೆ ಹೇಳಿಕೆ ಕೊಡುವುದಕ್ಕೆ ಸರ್ವ ಪ್ರಯತ್ನ ಮಾಡು ತ್ತೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ವ ಪ್ರಯತ್ನವನೂ ಮಾಡುತ್ತೇವೆಂದು ಹೇಳಿದ್ದಾರೆ ; ಪ್ರಯತ್ನ ಮಾಡಿದೆ ಆಗಲಿಲ್ಲವೆಂದು ನಾಳೆ ಹೇಳಿಬಿಟ್ಟರೆ ಅದು ಅವರಿಗೆ ಸುಲಭವಾಗುತ್ತದೆ. ನಾವು ಈ ಬಗ್ಗೆ ಒಂದು ಚರ್ಚೆ ಮಾಡಲು ಕೇಳಿದಾಗ ಬಜೆಟ್ ಮೇಲೆ ಮಾತನಾಡುವಾಗ ಚರ್ಚೆ ಮಾಡಿರಿ. ಸಮರ್ಪಕವಾದ ಉತ್ತರ ಬಂದರೆ ಇದನ್ನು ಕೈಬಿಡೋಣ, ಬಾರದೆಹೋದರೆ ಚರ್ಚೆ ತೆಗೆದುಕೊಳ್ಳೋಣ ಎಂದು ಹೇಳಿದಿರಿ. ಅವರು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು. ಇಲ್ಲದೆ ಇದ್ದರೆ ಈ ವಿಷಯದ ಮೇಲಿನ ಚರ್ಚೆಯನ್ನು ಪುನಃ ಎತ್ತಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಚರ್ಚೆ ಮಾಡಲು ಒಂದು ವಿಷಯವನ್ನು ತೆಗೆದುಕೊಂಡು ಬಂದು ಅಧ್ಯಕ್ಷರು ಅದಕ್ಕೆ ಅವಕಾಶ ಕೊಟ್ಟರೆ ಚರ್ಚೆ ಮಾಡಿ. ಆದರೆ ಈ ಬಗ್ಗೆ ಈಗ ಏನೂ ಹೇಳಲು ಬರುವುದಿಲ್ಲ ವೆಂದು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲವೆಂದರೆ. ಅವರು ತೀರ್ಮಾನ ತೆಗೆದು ಕೊಳ್ಳುವವರೆಗೂ ನಾವು ಕಾಯಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರ ಈ ಬಗ್ಗೆ ತೀರ್ಮಾನವನ್ನು, ಈ ಅಧಿವೇಶನ ಮುಗಿಯುವುದ ರೊಳಗೆ ತೆಗೆದುಕೊಂಡು ಸಭೆಗೆ ತಿಳಿಸುತ್ತಾರೆಯೇ ಎನ್ನುವುದು ನಮಗೆ ಬೇಕು.

(ii) In Affair of the National Insttute of Social Science.

ಶ್ರೀ ಎಂ. ಎಸ್. ಕೃಷ್ಣನ್ (ಮುಳ್ಳೇಶ್ವರಂ).—ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್. ಸೈನ್ಸ್ ವಿಚಾರವಾಗಿ ನಾನು ಪ್ರಸ್ತಾಪ ಮಾಡಬೇಕಾಗಿದೆ. ಅದನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡುವುದಾಗಿ ಹಿಂದೆ ಹೇಳಿದ್ದರು.

ಶ್ರೀ ಡಿ. ದೇವರಾಜ ಅರಸ್.—ನನಗೆ ತಿಳಿದ ಮಾಗೆ ಅದನ್ನು ಬೇರೆ ಯಾರಿಗೂ ಕೊಡಬೇಕೆಂದಿಲ್ಲ. ಅಂಥ ವಿಚಾರವೇನೂ ಇಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಕೊಡಬೇಕೆಂದು ಹೇಳಿದ್ದೆವು. ಅವರಿಗೆ ಕೊಡಬೇಕಾದರೆ ಒಂದು ಪ್ರೊಸೀಜರ್ ಇದೆ, ಅವರು ತೆಗೆದುಕೊಳ್ಳುವುದಕ್ಕೂ ಒಂದು ಪ್ರೊಸೀಜರ್ ಇದೆ. ನಾವು ಮೊದಲು ಸರ್ಕಾರಕ್ಕೆ ತೆಗೆದುಕೊಂಡಿದ್ದೇವೆ. ಆಮೇಲೆ ಅದನ್ನು ವಿಶ್ವವಿದ್ಯಾನಿಲಯಕ್ಕೆ ವಹಿಸಿ ಕೊಡುತ್ತೇವೆ.

Foot Ball match at Bangalore between India and German Players.

Sri D. DEVARAJ URS.—I would like to make one submission to the House. Today there is a Football match at 4.30 P.M. at the Kanteerava Stadium. The German players have come and players from all over India have been picked up and the best team is put up against them. I have also invited all the hon. members to witness the match. If the hon. members agree, I suggest that the House be adjourned at 3.30 P.M., to enable the hon. members to witness the match.

ಶ್ರೀ ಕೋಣಂದೂರು ಲಿಂಗಪ್ಪ.—ಈ ಬಗ್ಗೆ ಸಂತೋಷ ಪಕ್ಷಪಡಿಸುತ್ತೇನೆ. ಹಿಂದೆ ಶ್ರೀ ಬಿ.ಎಸ್ ಚಂದ್ರಶೇಖರಪ್ಪನವರು ಮತ್ತು ಶ್ರೀ ಇ.ಎ.ಎಸ್. ಪ್ರಸನ್ನ ಅವರು ವರ್ಲ್ಡ್ ರಿಕಾರ್ಡ್ ಬ್ರೇಕ್ ಮಾಡಿ ಇಂಡಿಯಾ ದೇಶಕ್ಕೆ ಗೌರವವನ್ನು ತಂದಾಗ ಒಂದು ದಿನ ರಜ ಕೊಡಲಿಲ್ಲ. ಶ್ರೀ ಮಂಜ್ರೇಕರ್ ಅವರು ಹಿಂದೆ ಹೀಗೆ ಮಾಡಿದಾಗ ಮಹಾರಾಷ್ಟ್ರದಲ್ಲಿ ರಜ ಕೊಟ್ಟರು. ಅದೇ ತರಹ ಸಂಪ್ರದಾಯವನ್ನು ಇಲ್ಲಿಯೂ ಬೆಳೆಸಿಕೊಂಡು ಬರಬೇಕು. ಎಂದು ಹೇಳುತ್ತಿದ್ದೇನೆ.

MYSORE LAND REFORMS (AMENDMENT) BILL 1973 AS REPORTED BY THE JOINT SELECT COMMITTEE—MOTION TO CONSIDER.

(Debate Continued)

ಶ್ರೀ ಎ. ಜಿ. ಕೊಡ್ಗಿ (ಬೈಯಂದೂರು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಮೇಲೆ ನೆನ್ನೆದಿವಸ ಮಾತನಾಡುತ್ತಾ ಕೆಲವೊಂದು ಸಣ್ಣಪುಟ್ಟ ಸೂಚನೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದೆ. ಇಂದು ನಾನು ಸೆಕ್ಷನ್ 72ರ ಬಗ್ಗೆ ಈ ಸದನದ ಗಮನವನ್ನು ಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಭೂ ಮಾಲೀಕನಾದವನು ತನ್ನಲ್ಲಿದ್ದ ಹೆಚ್ಚುವರಿ ಭೂಮಿಯನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಾಗ ಅದಕ್ಕೆ ಪರಿಹಾರ ಕೊಡುವ ವಿಚಾರವಾಗಿ ಕೆಲವೊಂದು ಸೂಚನೆಗಳಿವೆ. ಅದರ ಪ್ರಕಾರ ಮೊದಲನೆಯ 5 ಸಾವಿರ ರೂಪಾಯಿ ಗಳಿಗೆ ನೇಗಿಲು 15 ಪಾಲು, ನಂತರದ 5 ಸಾವಿರ ರೂಪಾಯಿಗಳಿಗೆ ನೇಗಿಲು 12 ಪಾಲು. ಅದರ ನಂತರದ